ಸಿ.ಸಿ. ನಂಬರಃ 234/2024

ಪಿ.ಡಬ್ಲ್ಯೂಃ 1

ದಿಃ 26-02-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಪಿ.ಎಲ್.ಎನ್ ಇವರಿಂದಃ

ನಮ್ಮ ಸ್ವಂತ ಊರು ಬೊಬ್ರುವಾಡ ಇರುತ್ತದೆ. ಆರೋಪಿತನು ನಮ್ಮ ಹತ್ತಿರದ ಸಂಬಂಧಿಕರು ಇದ್ದು, ಅವರು ನಮ್ಮ ಮನೆಗೆ ಬರುತ್ತಾ ಹೋಗುತ್ತಾ ಇರುತ್ತಾರೆ. ಆರೋಪಿತನು ಸಕರಾರಿ ನೌಕರಿಯಲ್ಲಿ ಕೃಷಿ ಇಲಾಖೆಯಲ್ಲಿ ಇದ್ದು, ಪ್ರಸ್ತುತ ನಿವೃತ್ತನಾಗಿರಬಹುದು, ನನಗೆ ಗೊತ್ತಿಲ್ಲ. ಆರೋಪಿತನಿಗೆ ನಾನು ಸಾಲವನ್ನು ನೀಡುವಾಗ ನಾನು ತರಕಾರಿ ವ್ಯಾಪಾರ ಮಾಡುತ್ತಿದ್ದೇನೆ. ಅಲ್ಲದೆ ಬೇರೆ ಮನೆಯಲ್ಲಿ ಮನೆಕೆಲಸ ಮಾಡುತ್ತಿದ್ದೇನು ಮತ್ತು ನನ್ನ ಮಕ್ಕಳ ಕೊಟ್ಟ ಹಣ ಹಾಗೂ ವಿಧವಾ ವೇತನ ಕೂಡಿ ಇಟ್ಟಿದ್ದೇನ. ಆರೋಪಿತನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಸಾಲವನ್ನು ಪಡೆಯು ಪೂರ್ವದಲ್ಲಿ 2-3 ಸಲ ಹಣವನ್ನು ತೆಗೆದುಕೊಂಡು ವಾಪಸ್ಸು ಕೊಟ್ಟಿರುತ್ತಾನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತೆಗೆದುಕೊಂಡ ಹಣವನ್ನು ವಾಪಸ್ಸು ಕೊಟ್ಟಿರುವುದಿಲ್ಲ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿತನಿಗೆ ಒಂದು ಬಾರಿ ರೂ.75 ಸಾವಿರ ಮತ್ತೊಮ್ಮೆ ರೂ.25 ಸಾವಿರ ಹಾಗೂ ಮತ್ತೊಮ್ಮೆ ರೂ.15 ಸಾವಿರ ಈ ರೀತಿಯಲ್ಲಿ ಒಟ್ಟು ರೂ.1,15,000/- ಸಾವಿರ ಹಣವನ್ನು ಕೊಟ್ಟಿರುತ್ತೇನೆ. ಸಾಮಾನ್ಯವಾಗಿ ಸಾಲವನ್ನು ಕೊಡುವಾಗ ಭದ್ರತೆಯನ್ನು ಕೊಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ನಾನು ನನ್ನ ಸಂಬಂಧಿಕ ಎಂದು ವಿಶ್ವಾಸದಲ್ಲಿ ಸಾಲ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಒಟ್ಟು 3 ಜನ ಹೆಣ್ಣು ಮಕ್ಕಳು ಇದ್ದು, ಆ ಪೈಕಿ ಒಬ್ಬಾಕೆ ಮೃತಪಟ್ಟಿರುತ್ತಾಳೆ. ನನ್ನ ಮೃತಪಟ್ಟ ಮಗಳ ಹೆಸರು ಆಶಾ ಇರುತ್ತದೆ. ನನ್ನ ಮಗಳು ಎಸ್ ಕೆ ಎಸ್ ಎನ್ನುವ ಮಹಿಳಾ ಸಂಘವನ್ನು ನಡೆಸುತ್ತಿದ್ದಳು ಎಂದರೆ ಸರಿ. ಸಾಕ್ಷಿಯು ನನಗೆ ಹೆಚ್ಚು ಗೊತ್ತಿರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಸದರಿ ಸಂಘಕ್ಕೆ ಸಂಬಂಧಪಟ್ಟಂತೆ ಸಭೆಗಳು ನಡೆಯುತ್ತಿತ್ತು ಎಂದರೆ ಸರಿಯಲ್ಲ.

3. ನನ್ನ ಮಗಳು ನಡೆಸುತ್ತಿದ್ದ ಎಸ್ ಕೆ ಎಸ್ ಎನ್ನುವ ಸಂಸ್ಥೆಯಲ್ಲಿ ಆರೋಪಿಯ ಹೆಂಡತಿಯು ಸದಸ್ಯಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ಹಾಗೆ ನನ್ನ ಮಗಳು ಸದರಿ ಸಂಸ್ಥೆಯನ್ನು ನಡೆಸುತ್ತಿದ್ದಾಗ ಸಂಸ್ಥೆಯ ಸದಸ್ಯರುಗಳಿಗೆ ಸಾಲ ಕೊಡಿಸುವುದು, ವಸೂಲಿ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಸಾಕ್ಷಿಯು ಆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆಶಾ ಇವರನ್ನು ಮದುವೆ ಮಾಡಿಕೊಟ್ಟ ನಂತರವೂ ಸಹ ಆಕೆಯು ನನ್ನ ಮನೆಗೆ ಬಂದು ಹೋಗುತ್ತಿದ್ದಳು ಎಂದರೆ ಸರಿ. ಸದರಿ ಆಶಾ ಇವರು ಮೃತಪಟ್ಟಿದ್ದರಿಂದ ಆಕೆಯ ಸಂಘ ಸಂಸ್ಥೆಗಳಿಗೆ

ಸಂಬಂಧಪಟ್ಟಂತೆ ದಾಖಲೆಗಳು ನಮ್ಮ ಮನೆಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಆರೋಪಿತನ ಹೆಂಡತಿ ನನ್ನ ಮಗಳು ನಡೆಸುತ್ತಿದ್ದ ಸಂಸ್ಥೆಯಲ್ಲಿ ಸದಸ್ಯಳು ಇದ್ದು, ಆರೋಪಿತನ ಹೆಂಡತಿಯಲ್ಲಿ ನನ್ನ ಮಗಳು ನಿನಗೆ ಸಾಲ ಕೊಡಿಸುತ್ತೇನೆ ಎಂದು ಹೇಳಿ 3 ಚೆಕ್ಕುಗಳನ್ನು ಪಡೆದುಕೊಂಡಿದ್ದು, ಆ ಚೆಕ್ಕುಗಳ ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನ್ನಿಂದ ಯಾವುದೇ ಸಾಲವನ್ನು ಪಡೆದುಕೊಳ್ಳದೇ ಇದ್ದರೂ ಸಹ ಆತನ ಹೆಂಡತಿಯಿಂದ ಪಡೆದುಕೊಂಡ ಚೆಕ್ಕಿನ ದುರುಪಯೋಗಪಡೆದುಕೊಂಡು ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ ಎಂ ಎಫ್ ಸಿ, ಅಂಕೋಲಾ.